# ಹೊಸತು

## ಫ್ಯಾಬ್ ಅಲೆ ಫ್ಯಾಷನ್



ಮಹಿಳೆಯರ ಫ್ಯಾಷನ್ ಉಡುಪು ಮತ್ತು ಸೌಂದರ್ಯಸಾಧನಗಳ ತಯಾರಿಕಾ ಸಂಸ್ಥೆ ಫ್ಯಾಬ್ ಅಲೆ.ಕಾಮ್ ಇದೀಗ ದಪ್ಪ ದೇಹದವರಿಗಾಗಿ ವಿಶೇಷ ಉಡುಪು ಸಂಗ್ರಹ ಹೊರತಂದಿದೆ.

ದೇಹ ದೊಡ್ಡದಿದ್ದರೂ ಫ್ಯಾಷನ್‌ಗೆ ಕೊರತೆಯಿಲ್ಲ ಎಂದಿರುವ ಕಂಪೆನಿ, ಈ ಉಡುಪುಗಳನ್ನು ಧರಿಸಿದರೆ ದಪ್ಪದವರೂ ಸುಂದರವಾಗಿ ಕಾಣಿಸುತ್ತಾರೆ ಎನ್ನುತ್ತದೆ.

ಆನ್‌ಲೈನ್‌ನಲ್ಲೂ ಲಭ್ಯ.

ಮಾಹಿತಿಗೆ: 8867622411

www.faballey.com

## ಜವೇರಿ ಡಿಸೈನ್ ಜ್ಯುವೆಲ್ಲರಿ

ಡಿಸೈನರ್ ಆಭರಣಗಳ ತಯಾರಿಕಾ ಸಂಸ್ಥೆ ಜವೇರಿ ಇದೀಗ ನವಿಲಿನ ವಿನ್ಯಾಸದ ಸಂಗ್ರಹವನ್ನು ಮಾರುಕಟ್ಟೆಗೆ ಪರಿಚಯಿಸಿದೆ.

ಎಲ್ಲ ವಯೋಮಾನದ ಮಹಿಳೆಯರಿಗೆ ಸೂಕ್ತವಾಗುವ ಆಕರ್ಷಕ ವಿನ್ಯಾಸಗಳನ್ನು ಈ ಸಂಗ್ರಹ ಹೊಂದಿದೆ.



ಸಾಂಪ್ರದಾಯಿಕ ನೋಟ ಈ ಆಭರಣಗಳ ವಿಶೇಷ, ಮದುವೆ ಮತ್ತಿತರ ಕಾರ್ಯಕ್ರಮಗಳಿಗೆ ಇದು ಮೆರುಗು ನೀಡುತ್ತದೆ ಎಂದು ಕಂಪೆನಿ ಹೇಳಿದೆ.

ಮಾಹಿತಿಗೆ: 09820224440

## ಬ್ರಿಟಾನಿಯ ಚಂಕೀಸ್




ಹಲವು ಬಗೆಯ ತಿಂಡಿ ತಿನಿಸುಗಳಿಗೆ ಪ್ರಸಿದ್ಧವಾದ ಬ್ರಿಟಾನಿಯ ಇದೀಗ ಚಂಕೀಸ್ ಬಿಡುಗಡೆ ಮಾಡಿದೆ. ಬಾಯಲ್ಲಿಟ್ಟೊಡನೆ ಕರಗುವ ಅನುಭವ ಇದನ್ನು ತಿಂದರೆ ಆಗುತ್ತದೆ ಎಂದು ಕಂಪೆನಿ ಹೇಳಿದೆ.

ಉತ್ತಮ ಗುಣಮಟ್ಟದ ಪ್ಯಾಕಿಂಗ್‌ನಿಂದಾಗಿ ಚಂಕೀಸ್ ತಾಜಾ ಆಗಿ ಉಳಿಯುತ್ತದೆ ಮತ್ತು ರುಚಿ ಕೆಡುವುದಿಲ್ಲ.

100 ಗ್ರಾಂ ಪ್ಯಾಕ್‌ನ ಬೆಲೆ 50 ರೂಪಾಯಿ. ಆನ್‌ಲೈನ್‌ನಲ್ಲೂ ಲಭ್ಯ.

ಮಾಹಿತಿಗೆ: 9538757922

## ಓರ್ರಾ ಪ್ಲಾಟಿನಮ್ ಒಡವೆ

ಪ್ಲಾಟಿನಮ್ ಆಭರಣಗಳಿಗೆ ಪ್ರಸಿದ್ಧವಾದ ಓರ್ರಾ, ಇದೀಗ ನೂತನ ಸರಣಿಯ ಆಭರಣಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಹ್ಯಾಂಡಿಕ್ರಾಫ್ಟ್ ವಿನ್ಯಾಸದ ಇವು ಯುವತಿಯರು ಬಯಸುವ ಆಕರ್ಷಕ ವಿನ್ಯಾಸದಲ್ಲಿದೆ ಎಂದು ಕಂಪೆನಿ ಹೇಳಿದೆ.



ಪಾರ್ಟಿಗಳಲ್ಲಿ ಧರಿಸಲು ಇದು ಸೂಕ್ತವಾಗಿದ್ದು, ದುಬಾರಿ ಉಡುಗೊರೆ ಕೊಡುವವರಿಗೂ ಸೂಕ್ತ.

ಆನ್‌ಲೈನ್‌ನಲ್ಲೂ ತಮಗಿಷ್ಟದ ಡಿಸೈನ್ ಬುಕ್ ಮಾಡಬಹುದು.

ವಿವರಗಳಿಗೆ:

8197250541

www.orra.co.in

## ಕಾರ್ಡಿಯೋ ಪ್ರೊಟೆಕ್ಟ್

ಹೃದಯದ ಆರೋಗ್ಯವನ್ನು ಕಾಪಾಡಲು ಮತ್ತು ರಕ್ತದೊತ್ತಡವನ್ನು ನಿಯಂತ್ರಣದಲ್ಲಿಡಲು ಕ್ಯೂರ್‌ಗಾರ್ಡನ್ ಇದೀಗ ನ್ಯಾಚುರಲ್ ಕಾರ್ಡಿಯೊ ಪ್ರೊಟೆಕ್ಟ್ ಉತ್ಪನ್ನ ಬಿಡುಗಡೆ ಮಾಡಿದೆ.




ಕೆಲಸದ ಒತ್ತಡವನ್ನು ಕಡಿಮೆ ಮಾಡಿ ಆರೋಗ್ಯಕರ ಹೃದಯ ಹೊಂದಲು ಇದು ಉತ್ತಮ ಆಯ್ಕೆ ಮತ್ತು ಸಂಪೂರ್ಣ ಸಸ್ಯೋತ್ಪನ್ನಗಳಿಂದ ಇದನ್ನು ತಯಾರಿಸಲಾಗಿದೆ ಎಂದು ಕಂಪೆನಿ ಹೇಳಿದೆ.

60 ಕ್ಯಾಪ್ಸೂಲ್‌ಗಳ ಪ್ಯಾಕ್‌ನ ಬೆಲೆ 545 ರೂಪಾಯಿ.

ಮಾಹಿತಿಗೆ: 04844080450

## ಸ್ಯಾಮ್‌ಸಂಗ್ Z1

ಎಲೆಕ್ಟ್ರಾನಿಕ್ ಉತ್ಪನ್ನಗಳಿಗೆ ಪ್ರಸಿದ್ಧವಾದ ಸ್ಯಾಮ್‌ಸಂಗ್ ಇದೀಗ ಟೈಜನ್ ಸಾಫ್ಟ್‌ವೇರ್ ಹೊಂದಿರುವ ಸ್ಯಾಮ್‌ಸಂಗ್ Z1 ಸ್ಮಾರ್ಟ್‌ಫೋನ್ ಹೊರತಂದಿದೆ.




768 ಎಂಬಿ ರ‍್ಯಾಮ್, 4 ಜಿಬಿ ಮೆಮೊರಿ ಸೌಲಭ್ಯದ ಜೊತೆಗೆ ಎರಡು ಸಿಮ್ ಕಾರ್ಡ್ ಬಳಸಬಹುದು.

3.1 ಮೆಗಾಪಿಕ್ಸೆಲ್ ಹಿಂಬದಿ ಕ್ಯಾಮೆರಾ ಮತ್ತು 1500 ಎಂಎಹೆಚ್ ಬ್ಯಾಟರಿ ಸಾಮರ್ಥ್ಯ ಇದರಲ್ಲಿದೆ.

ಬೆಲೆ 5700 ರೂಪಾಯಿ.

ವಿವರಗಳಿಗೆ: 09999976533